# ಪುರುಷರಲ್ಲಿ ಕ್ಷೀಣಿಸುತ್ತಿರುವ ಫಲವತ್ತತೆ



**ಪುರುಷರಲ್ಲಿ ಇತ್ತೀಚೆಗೆ ಲೈಂಗಿಕ ಸಮಸ್ಯೆ ಹೆಚ್ಚುತ್ತಿದೆ. ಭಾರತೀಯರಲ್ಲಿ ಪ್ರತಿ 10 ಪುರುಷರಲ್ಲಿ ಒಬ್ಬರು ನಪುಂಸಕತೆಯಿಂದ ಬಳಲುತ್ತಿರುವುದು ಇತ್ತೀಚೆಗೆ ಅಖಿಲ ಭಾರತ ವೈದ್ಯಕೀಯ ಸಂಸ್ಥೆ ಹೊರಗೆಡವಿದ ಸಮೀಕ್ಷೆ ಬಹಿರಂಗಪಡಿಸಿದೆ.**

■ ಯು.ವಿ.

ಪ್ರತಿಷ್ಠಿತ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿರುವ ನಿರ್ಮಲಾ ವಯಸ್ಸು ಇಪ್ಪತ್ತೈದು. ಆಕೆಯ ಪತಿ ಸಾಫ್ಟ್‌ವೇರ್ ಎಂಜಿನಿಯರ್. ಮದುವೆಯಾಗಿ ಮೂರು ವರ್ಷಗಳೇ ಆಗಿವೆ. ಮನೆಯಲ್ಲಿ ಇನ್ನೂ ಮೊಮ್ಮಗು ಬಂದಿಲ್ಲ ಎಂಬ ಚಿಂತೆ ನಿರ್ಮಲಾಳ ಅತ್ತೆ ಮಾವನಿಗಾದರೆ ಎಷ್ಟೇ ಪ್ರಯತ್ನಪಟ್ಟರೂ ಮನೆಗೆ ಹೊಸ ಅತಿಥಿಯ ಆಗಮನದ ಸೂಚನೆಯೇ ಇಲ್ಲ ಎಂಬ ಕೊರಗು ದಂಪತಿಗೆ.

ಅಂತಿಮ ಪ್ರಯತ್ನ ಎಂಬಂತೆ ವೈದ್ಯರ ಬಳಿ ತಪಾಸಣೆ ಮಾಡಿಸಿದಾಗ ಪತಿಗೆ ಫಲವತ್ತತೆ ಸಮಸ್ಯೆ ಎಂಬುದು ಪತ್ತೆಯಾಯಿತು. ಇದರಿಂದ ತಲೆ ಮೇಲೆ ಕೈಹೊತ್ತು ಕೂರದೆ ದಂಪತಿ ನಿಯಮಿತ ಚಿಕಿತ್ಸೆ ಪಡೆಯುವ ತೀರ್ಮಾನಕ್ಕೆ ಬಂದರು.

ಕೆಲಸದ ಒತ್ತಡ, ಜೀವನಶೈಲಿ ಬದಲಾವಣೆ, ಸಮಯದ ಪರಿವೆ ಇಲ್ಲದೆ ಕೆಲಸ ಮಾಡುವುದರಿಂದ ಹೊತ್ತು ಹೊತ್ತಿಗೆ ಸರಿಯಾಗಿ ಊಟ, ತಿಂಡಿ ಸಿಗದೆ ಫಾಸ್ಟ್‌ಫುಡ್‌ಗೆ ಮೊರೆ ಹೋಗಬೇಕಾದ ಅನಿವಾರ್ಯತೆ, ವೃತ್ತಿಸ್ಥಳದಲ್ಲಿ ಒತ್ತಡ ಹೆಚ್ಚಿದಾಗ ಧೂಮಪಾನದ ದಾಸರಾಗಬೇಕಾದ ಪರಿಸ್ಥಿತಿ... ಇವೇ ಮುಂತಾದ ಕಾರಣಗಳಿಂದ ಆತನಿಗೆ ಸಂಭೋಗದಲ್ಲಿ ಆಸಕ್ತಿ ಕಡಿಮೆಯಾಗಲು ಕಾರಣವಾಯಿತು. ಧೂಮಪಾನ ಅತಿಯಾದ ಕಾರಣ ಫಲವತ್ತತೆ ಸಮಸ್ಯೆ ಕಾಡಲಾರಂಭಿಸಿತು.

ಇತ್ತೀಚೆಗೆ ಪುರುಷರಲ್ಲಿ ಲೈಂಗಿಕ ಸಮಸ್ಯೆ ಹೆಚ್ಚುತ್ತಿದೆ. ಭಾರತೀಯರಲ್ಲಿ ಪ್ರತಿ 10 ಪುರುಷರಲ್ಲಿ ಒಬ್ಬರು ನಪುಂಸಕತೆಯಿಂದ ಬಳಲುತ್ತಿರುವುದು ಇತ್ತೀಚೆಗೆ ಅಖಿಲ ಭಾರತ ವೈದ್ಯಕೀಯ ಸಂಸ್ಥೆ ಹೊರಗೆಡವಿದ ಸಮೀಕ್ಷೆ ಬಹಿರಂಗಪಡಿಸಿದೆ. ಕೆಲಸದ ಅತಿ ಒತ್ತಡ, ಚಿಕ್ಕವಯಸ್ಸಿಗೇ ಆತುಕೊಳ್ಳುವ ಜೀವನಶೈಲಿ ಕಾಯಿಲೆಗಳಾದ ಮಧುಮೇಹ, ಏರುರಕ್ತದೊತ್ತಡ, ಸ್ಥೂಲಕಾಯ ಮುಂತಾದವು ಪುರುಷರಲ್ಲಿ ನಪುಂಸಕತೆ ಹೆಚ್ಚಾಗಲು ಕಾರಣ ಎಂಬುದೂ ವೈದ್ಯಕೀಯ ವಲಯ ಕಳವಳಗೊಳ್ಳಲು ಕಾರಣವಾಗಿದೆ.

ಅಧ್ಯಯನದ ಪ್ರಕಾರ ಪುರುಷರಲ್ಲಿ ಪ್ರಿಮೆಚೂರು ಇಜಾಕ್ಯುಲೇಷನ್ (ಪಿಎಮ್‌ಇ) ಮತ್ತು ಇರೆಕ್ಟಲ್ ಡಿಸ್‌ಫಂಕ್ಷನ್ (ಇಡಿ), ಪೈರೊನಿ ಮತ್ತು ಮೈಕ್ರೊ ಪೆನಿಸ್ ಮುಂತಾದ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂಬುದು ಗೊತ್ತಾಗಿದೆ. ಇದರ ಪರಿಣಾಮವಾಗಿ ಲೈಂಗಿಕ ಜೀವನದಲ್ಲಿ ತೃಪ್ತಿ ಕಾಣದೆ ವಿಚ್ಛೇದನ ಪ್ರಕರಣಗಳೂ ಹೆಚ್ಚಾಗುತ್ತಿವೆ. ಪುರುಷರು ತಮ್ಮ ಲೈಂಗಿಕ ಸಮಸ್ಯೆಗಳಿಗೆ ವೈದ್ಯಕೀಯ ಪರಿಹಾರ ಕಂಡುಕೊಳ್ಳಲು ಹಿಂಜರಿಯುತ್ತಿರುವುದು ಕೂಡ ಕೌಟುಂಬಿಕ ಸಾಮರಸ್ಯ ಹದಗೆಡಲು ಕಾರಣವಾಗುತ್ತಿವೆ.

'ಈಗೀಗ ಪುರುಷರಲ್ಲಿ ಲೈಂಗಿಕ ದೌರ್ಬಲ್ಯ ಹೆಚ್ಚುತ್ತಿದೆ. ಇದಕ್ಕೆ ಕಾರಣ ಪುರುಷರಲ್ಲಿ ತಮ್ಮ ಆರೋಗ್ಯದ ಬಗ್ಗೆ ಇರುವ ತಪ್ಪು ತಿಳಿವಳಿಕೆ. ಹೀಗಾಗಿ ಪುರುಷರು ಸರಿಯಾದ ಸಮಯದಲ್ಲಿ ವೈದ್ಯರಲ್ಲಿ ಚಿಕಿತ್ಸೆಗೆ ಹೋಗದೇ ಇರುವುದು. ಇದರಿಂದ ದಂಪತಿಗಳಲ್ಲಿ ಮಗು ಪಡೆಯುವ ಹಂಬಲ ಮರೀಚಿಕೆಯಾಗುತ್ತಿದೆ' ಎಂದು ಹೇಳುತ್ತಾರೆ ಬೆಂಗಳೂರಿನಲ್ಲಿರುವ ಯುರಾಲಜಿ ಮತ್ತು ಲೈಂಗಿಕ ತಜ್ಞ ಡಾ. ಮಧುಸೂದನ್.

ಸಂತಾನಹೀನತೆ ಇದೀಗ ಗಂಭೀರ ಸಮಸ್ಯೆಯಾಗಿದೆ. ಭಾರತದಲ್ಲಿರುವ ಶೇ.15–20ರಷ್ಟು ಜೋಡಿ ಈ ಸಮಸ್ಯೆಯಿಂದ ನರಳುತ್ತಿದ್ದಾರೆ. ಇದು ಕೇವಲ ಮಹಿಳೆಯರ ಸಮಸ್ಯೆ ಎಂಬ ಸಾಂಪ್ರದಾಯಿಕ ಅಭಿಪ್ರಾಯ ಎಲ್ಲರಲ್ಲಿದೆ. ಆದರೆ ತಜ್ಞ ವೈದ್ಯರ ಪ್ರಕಾರ ಬಂಜೆತನ ಅಷ್ಟೇ ಪ್ರಮಾಣದಲ್ಲಿ ಗಂಡಸರನ್ನೂ ಕಾಡುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಬಂಜೆತನ ದೇಹದ ಸಂತಾನೋತ್ಪತ್ತಿ ವ್ಯವಸ್ಥೆಯ ಒಂದು ಕಾಯಿಲೆ. ಇದಕ್ಕೆ ಹಲವು ಕಾರಣಗಳಿವೆ. ಇವುಗಳಲ್ಲಿ ಕೆಲವು ವೈದ್ಯಕೀಯ ಕಾರಣಗಳಾದರೆ, ಇನ್ನು ಕೆಲವು ಜೀವನಶೈಲಿಗೆ ಸಂಬಂಧಿಸಿದವು.



ಪುರುಷರಲ್ಲಿ ಲೈಂಗಿಕ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ ಪಡೆದರೆ ಸಂತಾನಭಾಗ್ಯ ಪ್ರಾಪ್ತಿಯಾಗುವುದರಲ್ಲಿ ಅನುಮಾನವಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಾರೆ ಈ ವೈದ್ಯರು. ■